# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 397

02. ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ)

03. ಉತ್ತರಿಸುವ ದಿನಾಂಕ : 15-09-2022

04. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಂಚಾರಿ ಸಿಗ್ನಲ್‌ಗಳಲ್ಲಿ ಅದರಲ್ಲೂ ಹಲಸೂರು ಕೆರೆ, ಫ್ರೇಜರ್‌ಟೌನ್, ಇಂದಿರಾನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಂಗಳಮುಖಿಯರು ವಾಹನ ಸವಾರರಿಂದ ಬಲವಂತವಾಗಿ ಹಣ ಸಂಗ್ರಹಿಸುತ್ತಿರುವುದು, ಹಣ ನೀಡದಿದ್ದ ಪಕ್ಷದಲ್ಲಿ ವಾಹನ ಸವಾರರ ಮೇಲೆ ಹಲ್ಲೆ ಮಾಡುವುದು, ಅಶ್ಲೀಲವಾಗಿ ಬಟ್ಟೆ ತೆಗೆದು ಅಂಗಾಂಗಳನ್ನು ಪ್ರದರ್ಶಿಸುತ್ತಿರುವುದರಿಂದ ರಸ್ತೆಯಲ್ಲಿ ಪ್ರತಿನಿತ್ಯ ಓಡಾಡುವ ವಾಹನ ಸವಾರರಿಗೆ ಮತ್ತು ಮಹಿಳೆಯರಿಗೆ ತೊಂದರೆ ಮತ್ತು ಮುಜುಗರ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ<br>ಬೆಂಗಳೂರು ನಗರದ ವ್ಯಾಪ್ತಿಯ ಹಲಸೂರು ಕೆರೆ, ಫ್ರೇಜರ್‌ಟೌನ್, ಇಂದಿರಾನಗರ ಮತ್ತು ಸುತ್ತ ಮುತ್ತಲಿನ ಪ್ರದೇಶದಲ್ಲಿ ಮಂಗಳಮುಖಿಯರು ವಾಹನ ಸವಾರರಿಂದ ಬಲವಂತವಾಗಿ ಹಣ ಸಂಗ್ರಹಿಸುತ್ತಿರುವುದು. ಹಣ ನೀಡದಿದ್ದ ಪಕ್ಷದಲ್ಲಿ ವಾಹನ ಸವಾರರ ಮೇಲೆ ಹಲ್ಲೆ ಮಾಡುವುದು, ಅಶ್ಲೀಲವಾಗಿ ಬಟ್ಟೆ ತೆಗೆದು ಅಂಗಾಂಗಗಳನ್ನು ಪ್ರದರ್ಶಿಸುತ್ತಿರುವುದರಿಂದ ರಸ್ತೆಯಲ್ಲಿ ಪ್ರತಿನಿತ್ಯ ಓಡಾಡುವ ವಾಹನ ಸವಾರರಿಗೆ ಮತ್ತು ಮಹಿಳೆಯರಿಗೆ ತೊಂದರೆ ಮತ್ತು ಮುಜುಗರ ಉಂಟಾಗುತ್ತಿರುವುದರ ಬಗ್ಗೆ ಸಾರ್ವಜನಿಕರು ದೂರು ನೀಡಿದಾಗ ತ್ವರಿತವಾಗಿ ಸ್ಪಂದಿಸುತ್ತಿದ್ದು, ಈ ಬಗ್ಗೆ ಹಲಸೂರು ಉಪ ವಿಭಾಗದ, ಜೀವನ್‌ಭೀಮಾ ನಗರ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ದಿನಾಂಕ:01.01.2019 ರಂದು ರಾತ್ರಿ 09:40 ಗಂಟೆ ಸಮಯದಲ್ಲಿ ಶ್ರೀ ವಿದಿತ್‌ಗಂಗ್ ಬಿನ್ ಸಂಜಯ್‌ಕುಮಾರ್‌ಗಂಗ್ 22 ವರ್ಷ, ವಾಸ ಎ.ಕೆ.ಕಾಲೋನಿ, ದೊಮ್ಮಲೂರು, ಬೆಂಗಳೂರು ನಗರ ರವರು ದೊಮ್ಮಲೂರು ಸೇತುವೆ ಬಳಿ ಹೋಗುತ್ತಿರುವಾಗ ಮೂರು ಜನ ಮಂಗಳಮುಖಿಯರು ಫಿರ್ಯಾದುದಾರರ ಬಳಿ ಹಣ ಕೇಳಿದ್ದು, ಪರ್ಸ್‌ನಿಂದ ರೂ.10/- ಕೊಡಲು ಹೋದಾಗ ಮಂಗಳಮುಖಿಯರು ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿ ಅವರ ಬಳಿಯಿದ್ದ ರೂ. 3000/- ಹಣವನ್ನು ಬೆದರಿಕೆ ಹಾಕಿ ಪಡೆದುಕೊಂಡು ಓಡಿ ಹೋಗಿರುತ್ತಾರೆಂದು ಕೊಟ್ಟ ದೂರನ್ನು |

| | | |
|---|---|---|
| | | ಪಡೆದು ಠಾಣಾ ಮೊ.ಸಂ. 03/2019 ಕಲಂ 384, 504 ಸಹಿತ 34 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ನಂತರ ಆರೋಪಿಗಳಾದ ಎ1.ಜ್ಯೋತಿ @ ಬಾಷ @ ಹಸೀನಾ ಬಿನ್ ಲೇಟ್ ಸಿದ್ದಪ್ಪ 35 ವರ್ಷ, ಎ2.ರಮ್ಯ @ ವಿನೋದ್ ಬಿನ್ ಲೇಟ್ ಮಲ್ಲಪ್ಪ 30 ವರ್ಷ, ಎ3.ಪೂಜಾ @ ದೇವೇಂದ್ರ ಬಿನ್ ಗಂಗಪ್ಪ 23 ವರ್ಷ, ಎಲ್ಲರ ವಿಳಾಸವು ಸೊಲ್ಲಾಪುರಮ್ಮ ದೇವಸ್ಥಾನದ ಹತ್ತಿರ, ಸುಂಕದಕಟ್ಟೆ ಬೆಂಗಳೂರು ನಗರವಾಗಿದ್ದು, ಇವರುಗಳನ್ನು ದಿ:02-01-2019 ರಂದು ದಸ್ತಗಿರಿ ಮಾಡಿ, ಮಾನ್ಯ 10ನೇ ಎಸಿಎಂಎಂ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಸಿಸಿ ನಂ.58228/2019 ರಲ್ಲಿ ವಿಚಾರಣೆಯಲ್ಲಿರುತ್ತದೆ. |
| ಆ | ಸದರಿ ಪ್ರಕರಣಗಳ ಬಗ್ಗೆ ಪೋಲೀಸ್ ಇಲಾಖೆಯವರು ಸಾರ್ವಜನಿಕರಿಂದ ದೂರುಗಳನ್ನಾಗಲೀ ಅಥವಾ ಕರೆಗಳನ್ನಾಗಲಿ ಸ್ವೀಕರಿಸಲು ನಿರಾಕರಿಸುತ್ತಿರುವುದು ಮತ್ತು ದೂರುಗಳನ್ನು ದಾಖಲಿಸುವ ಬದಲು ದೂರುದಾರರಿಗೆ ಬುದ್ಧಿ ಹೇಳಿ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಈ ಬಗ್ಗೆ ಸಾರ್ವಜನಿಕರಿಂದ ಯಾವುದೇ ದೂರುಗಳನ್ನಾಗಲೀ ಅಥವಾ ದೂರು ಸಂಬಂಧಿತ ಕರೆಗಳನ್ನಾಗಲಿ ಸ್ವೀಕರಿಸಲು ನಿರಾಕರಿಸಿರುವುದಿಲ್ಲ ಹಾಗೂ ದೂರುಗಳನ್ನು ದಾಖಲಿಸುವ ಬದಲು ದೂರುದಾರರಿಗೆ ಯಾವುದೇ ರೀತಿ ಬುದ್ಧಿ ಹೇಳಿ ಕಳುಹಿಸುತ್ತಿರುವುದಿಲ್ಲ. ಕಾನೂನು ರೀತ್ಯಾ ಪ್ರಕರಣಗಳನ್ನು ದಾಖಲಿಸಿ ಕ್ರಮ ಜರುಗಿಸಲಾಗುತ್ತಿದೆ. |
| ಇ | ಹಲಸೂರು ಕೆರೆ, ಫ್ರೇಜರ್‌ಟೌನ್, ಇಂದಿರಾನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಂಗಳಮುಖಿಯರ ವಿರುದ್ಧ ದೂರುಗಳನ್ನು ದಾಖಲಿಸಲು ಪೋಲೀಸರು ಹಿಂದೇಟು ಹಾಕಲು ಕಾರಣಗಳೇನು; | ಹಲಸೂರು ಕೆರೆ, ಫ್ರೇಜರ್‌ಟೌನ್, ಇಂದಿರಾನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಂಗಳಮುಖಿಯರ ವಿರುದ್ಧ ದೂರುಗಳನ್ನು ದಾಖಲಿಸಲು ಯಾವುದೇ ಹಿಂದೇಟು ಹಾಕಿರುವುದಿಲ್ಲ. ಈ ಬಗ್ಗೆ ನಾಗರೀಕರು/ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಿ ಕೂಡಲೇ ಕಾನೂನು ರೀತ್ಯ ಕ್ರಮ ಜರುಗಿಸಲಾಗುತ್ತಿದೆ. |
| ಈ | ಈವರೆವಿಗೂ ಎಷ್ಟು ಪ್ರಕರಣಗಳು ದಾಖಲಿಸಲಾಗಿದೆ; ಯಾವ ಯಾವ ಶಿಕ್ಷೆ ವಿಧಿಸಲಾಗಿದೆ; (ಪ್ರಕರಣವಾರು ಮಾಹಿತಿ ನೀಡುವುದು) | ಜೆ.ಬಿ ನಗರ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಜರುಗಿದ ಘಟನೆಯ ಮೇರೆಗೆ ಜೆ.ಬಿ.ನಗರ ಪೋಲೀಸ್ ಠಾಣಾ ಮೊ.ಸಂ. 03/2019 ಕಲಂ 384, 504 ಸಹಿತ 34 ಐಪಿಸಿ ರೀತ್ಯ ಪ್ರಕರಣವು ದಾಖಲಾಗಿದ್ದು, ತನಿಖೆಯ ನಂತರ ಮಾನ್ಯ 10ನೇ ಎಸಿಎಂಎಂ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿಯನ್ನು |

| | | |
|---|---|---|
| | | ಸಲ್ಲಿಸಿದ್ದು, ಸಿಸಿ ನಂ.58228/2019 ರಲ್ಲಿ ವಿಚಾರಣೆಯಲ್ಲಿರುತ್ತದೆ. ಮುಂದಿನ ವಿಚಾರಣೆ ದಿನಾಂಕ: 06.12.2022 ಗೆ ನಿಗದಿಪಡಿಸಲಾಗಿರುತ್ತದೆ. |
| ಉ | ಈ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವಾಗಿ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು; | ಈ ಬಗ್ಗೆ ಮುಂಜಾಗ್ರತಾ ಕ್ರಮವಾಗಿ ಪಿ.ಎಸ್.ಐ., ಹೊಯ್ಸಳ/ಚೀತಾ ವಾಹನಗಳಲ್ಲಿ ಹಾಗೂ ಸುಧಾರಿತ ಬೀಟ್‌ಗಳ ಅಧಿಕಾರಿ/ಸಿಬ್ಬಂದಿಗಳನ್ನು ಗಸ್ತು ಕರ್ತವ್ಯಕ್ಕೆ ನಿಯೋಜನೆ ಮಾಡಿರುತ್ತದೆ. ಜನಪೀಡಿತ ಪ್ರದೇಶ, ಟ್ರಾಫಿಕ್ ಸಿಗ್ನಲ್ ಹಾಗೂ ರಾತ್ರಿ ಸಮಯದಲ್ಲಿ ನಿರ್ಜನ ಸ್ಥಳಗಳಲ್ಲಿ ಹೆಚ್ಚಿನ ಗಸ್ತು ನಿರ್ವಹಿಸಿ ನಾಗರೀಕರಿಗೆ ಮಂಗಳಮುಖಿಯರಿಂದ ಯಾವುದೇ ರೀತಿ ಮುಜುಗರ ಮತ್ತು ತೊಂದರೆಯಾಗದಂತೆ ಜನಸ್ನೇಹಿಯಾಗಿ ಕರ್ತವ್ಯ ನಿರ್ವಹಿಸಲಾಗುತ್ತಿದೆ. |
| ಊ | ಮಂಗಳಮುಖಿಯವರಿಂದ ಪೋಲೀಸರು ಹಫ್ತಾ ವಸೂಲಿ ಮಾಡುತ್ತಿರುವುದು ಮತ್ತು ಮಂಗಳಮುಖಿಯರು ದುಡ್ಡು ವಸೂಲಿ ಮಾಡಲು ಪೋಲೀಸರೇ ಸಹಕಾರ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

**HD 56 PCQ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು.